**ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಅಮಿಟೆಡ್**

**ಆಡಳಿತ ಕಛೇರಿ: 14, ಸೌತ್ ಎಂಡ್ ರಸ್ತೆ , ಶೇಷಾದ್ರಿಪುರಂ, ಬೆಂಗಳೂರು – 560 020.**

**ಫೋನ್ ನಂ. 23562229 ; 23460051 ; 23461344**

ಮಾನ್ಯ ಸದಸ್ಯರೇ,

ದಿನಾಂಕ 12.12.2021ರ ಭಾನುವಾರದಂದು 10.00ಘಂಟೆಯಿಂದ ಮಧ್ಯಾಹ್ನ 1.00 ಘಂಟೆವರೆಗೆ 2020-21ನೇ ಸಾಲಿನ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವರ್ಚುವಲ್ /ವೀಡಿಯೊ ಸಮಾವೇಶದ ಮುಖಾಂತರ ನಡೆಸಲು ತೀರ್ಮಾನಿಸಲಾಗಿದೆ. ಈ ವರ್ಚುವಲ್ ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನ ನಿಯತ ಸದಸ್ಯರ ಮೊಬೈಲ್ ಸಂಖ್ಯೆಯು ಅವಶ್ಯವಾಗಿರುವುದರಿಂದ ಎಲ್ಲಾ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು 02.12.2021ರೊಳಗೆ ಬ್ಯಾಂಕಿಗೆ ಸಲ್ಲಿಸಲು ಕೋರಲಾಗಿದೆ. ಮೊಬೈಲ್ ಸಂಖ್ಯೆಯನ್ನು ಈಗಾಗಲೇ ಸಲ್ಲಿಸಿದ್ದು ಮೊಬೈಲ್ ಸಂಖ್ಯೆ ಬದಲಾಯಿಸಿರುವ ಸದಸ್ಯರು ಕೂಡ ಮೇಲಿನ ದಿನಾಂಕದೊಳಗೆ ತಮ್ಮ ಹೊಸ ಸಂಖ್ಯೆಯನ್ನು ಸಲ್ಲಿಸಲು ವಿನಂತಿಸಲಾಗಿದೆ.

ಸದಸ್ಯರು ಈ ಕೆಳಗೆ ನೀಡಿರುವ ಲಿಂಕ್‌ಗೆ ಲಾಗಿನ್ ಆಗಿ ಸಭೆಯಲ್ಲಿ ಭಾಗವಹಿಸಲು ತಿಳಿಸಲಾಗಿದೆ.

**https://cdn.vouchpro.tv/mahilabankagm**

**ವಿಷಯಗಳು**

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು.
4. 2019-20ನೇ ಸಾಲಿನ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
5. ಆಡಳಿತ ಮಂಡಲಿಯು ಮಂಡಿಸಿದ 2020-21 ನೇ ಸಾಲಿನ ವಾರ್ಷಿಕ ವರದಿಯ ಪರಿಗಣನೆ.
6. 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಅನುಪಾಲನಾ ವರದಿಗಳ ಪರಿಶೀಲನೆ.
7. 2019-20ರ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳ ಪರಿಶೀಲನೆ.
8. ಆಡಳಿತ ಮಂಡಲಿಯು ರೂಪಿಸಿದ ಬ್ಯಾಂಕಿನ 2021-22 ನೆಯ ವಾರ್ಷಿಕ ಸಾಲಿನ ಕ್ರಿಯಾಯೋಜನೆ ಮತ್ತು ಕಾರ್ಯ ಚಟುವಟಿಕೆಗಳ ಪರಿಗಣನೆ.
9. ಬ್ಯಾಂಕಿನ ಕಾರ್ಯಾಚರಣೆಗಳ ಅವಲೋಕನ ಹಾಗೂ ಬ್ಯಾಂಕಿನ ಕಾರ್ಯಾಚರಣೆಗಳಲ್ಲಿ ಕೊರತೆ ಏನಾದರೂ ಇದ್ದಲ್ಲಿ, ಆ ಬಗ್ಗೆ ಪರಿಶೀಲನೆ ಮತ್ತು ಅಂತಹ ಕೊರತೆಯನ್ನು ನೀಗಿಸಲು ಹಮ್ಮಿಕೊಂಡ ಕ್ರಮದ ಅವಲೋಕನ.
10. 2020-21 ನೇ ಸಾಲಿನ ಖರ್ಚು ಹಾಗೂ ಅಂದಾಜು ಆಯವ್ಯಯ ಪಟ್ಟಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಅನುಮೋದನೆ ಮತ್ತು 2021-22ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಅಂಗೀಕರಿಸುವುದು.
11. ಲೆಕ್ಕಪರಿಶೋಧಕರು ದೃಢೀಕರಿಸಿದ 2020-21 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ.
12. 2020-21ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಹಾಗೂ ಸಮಾಪನೆಯಾದ ಸದಸ್ಯರ ಪಟ್ಟಿಯ ಪರಿಶೀಲನೆ.
13. 2020-21ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿಯನ್ನು ಆರ್.ಬಿ.ಐ ನಿರ್ದೇಶನದನ್ವಯ ಅನುಮೋದಿಸುವುದು.
14. ಮೀಸಲು ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ವಿಮರ್ಶೆ.
15. ಬ್ಯಾಂಕಿನ ಸಿಬ್ಬಂದಿಬಲ ಮತ್ತು ನೌಕರರಿಗೆ ಕೊಡಲಾಗುವ ವೇತನ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳು ಹಾಗೂ ಸಿಬ್ಬಂದಿ ಸ್ವಯಂ ಸೇವಾ ನಿವೃತ್ತಿ ಬಗ್ಗೆ.
16. ಬ್ಯಾಂಕಿನ ಬೈಲಾ ತಿದ್ದುಪಡಿ.
17. ವಿವಿಧ ನಿಧಿಗಳನ್ನು ಕರಡು ಸಾಲದ ನಿಧಿಗೆ ವರ್ಗಾಯಿಸಿರುವುದರ ಬಗ್ಗೆ ಅನುಮೋದನ.
18. ಮುನ್ಸೂಚನೆಗೆ ಸಂಬಂಧಿಸಿದ ವಿಷಯಗಳ ಚರ್ಚೆ.
19. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಚಾರಗಳು.
20. ವಂದನಾರ್ಪಣೆ.

ಬೆಂಗಳೂರು
ದಿನಾಂಕ : 30.09.2021

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ಸಹಿ/-
ಯಮುನ . ಪಿ
ಪ್ರಧಾನ ವ್ಯವಸ್ಥಾಪಕರು

**ಬ್ಯಾಂಕಿನ ಬೈಲಾ 10.1ರ ಅನ್ವಯ ಪ್ರತಿ ನಿಯತ ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ಮೊತ್ತ ರೂ.1000/- ಆಗಿದ್ದು , ಕಡಿಮೆ ಇರುವ ಸದಸ್ಯರು ದಿನಾಂಕ 10.12.2021ರೊಳಗೆ ಪಾವತಿಸಲು ಕೋರಲಾಗಿದೆ.**

**2020-2021ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಆರ್ಥಿಕ ತಖ್ತೆ ಹಾಗೂ ಸಭೆಯಲ್ಲಿ ಭಾಗವಹಿಸಲು ಲಿಂಕ್ ಮಾಹಿತಿಗೆ ಬ್ಯಾಂಕಿನ ವೆಬ್‌ಸೈಟ್ Mahilacb.com ಗೆ ಸಂದರ್ಶಿಸುವುದು.**

ಸದಸ್ಯರ ಗಮನಕ್ಕೆ

1. ಸರ್ವಸದಸ್ಯರ ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು 5 ದಿನಗಳ ಮುಂಚಿತವಾಗಿ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಲುಪಿಸಬೇಕಾಗಿ ವಿನಂತಿ.
2. ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯನ್ನು ಬ್ಯಾಂಕಿನ ವೆಬ್‌ಸೈಟ್ www.mahilacb.com ನಲ್ಲಿ ನೀಡಲಾಗಿದೆ.
3. ವಿಳಾಸ ಬದಲಾವಣೆ ಇದ್ದಲ್ಲಿ ಬ್ಯಾಂಕಿಗೆ ತಕ್ಷಣ ತಿಳಿಸಬೇಕಾಗಿ ವಿನಂತಿ.
4. ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಜವಾಬ್ದಾರಿ ಮತ್ತು ಕರ್ತವ್ಯಗಳು :
ತಿದ್ದುಪಡಿಯಾದ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಬ್ಯಾಂಕಿನ ಸದಸ್ಯರು ಬ್ಯಾಂಕಿನ ಆರ್ಥಿಕ ಚಟುವಟಿಕೆಗಳಲ್ಲಿ ಕೆಲವು ಕನಿಷ್ಠ ರೀತಿಗಳಲ್ಲಿಯಾದರೂ ಭಾಗಿಯಾಗಬೇಕಾದ ಅನಿವಾರ್ಯತೆ ಇರುತ್ತದೆ. ಆದ್ದರಿಂದ ಸದಸ್ಯರಿಗೆ ಅವರ ಹಕ್ಕು ಮತ್ತು ಕರ್ತವ್ಯಗಳ ಅರಿವು ಮೂಡಿಸುವ ಸಲುವಾಗಿ ಈ ಕೆಳಕಂಡ ಮಾಹಿತಿಗಳನ್ನು ತಿಳಿಸಲು ಆಡಳಿತ ಮಂಡಲಿ ಇಚ್ಛಿಸುತ್ತದೆ.

ಬ್ಯಾಂಕಿನ ಕನಿಷ್ಠ ಸೇವೆಯನ್ನು 2020-21ರ ಸಾಲಿನಲ್ಲಿ ಪಡೆಯದೆ ಇರುವ ಸದಸ್ಯರು ಮುಂದಿನ 3 ವರ್ಷಗಳಲ್ಲಿ ಸಾಮಾನ್ಯ ಸರ್ವ ಸದಸ್ಯರ ಸಭೆಯ ಕಲಾಪಗಳಲ್ಲಿ ಪಾಲ್ಗೊಳ್ಳಲು ಹಾಗೂ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಬ್ಯಾಂಕಿನ ಕನಿಷ್ಠ ಸೇವೆಗಳು ಈ ಕೆಳಕಂಡಂತಿರುತ್ತದೆ.

- ಮೂರು ವರ್ಷಗಳ ಅವಧಿಗೆ ಕನಿಷ್ಠ ಠೇವಣಿ ರೂ.2500/- ಅಥವಾ ಎರಡು ವರ್ಷಗಳ ಮಾಸಿಕ ರೂ.100/- ರ ಆವರ್ತಕ ಠೇವಣಿ;

ಅಥವಾ

- ಉಳಿತಾಯ/ಚಾಲ್ತಿ ಖಾತೆಯಲ್ಲಿ ಒಂದು ವರ್ಷದಲ್ಲಿ ಕನಿಷ್ಠ 3 ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಠ ರೂ.500/- ಧನ ಶಿಲ್ಕು ನಿರ್ವಹಣೆ;

ಅಥವಾ

- ನಿಯಮಗಳಿಗೆ ಒಳಪಟ್ಟು ಕನಿಷ್ಠ ರೂ.5000/-ಸಾಲ;

ಅಥವಾ

- ಸುಸ್ತಿಯಾಗಿರದ ಸಾಲದ ಖಾತೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ ರೂ. 250/- ಬಡ್ಡಿಯನ್ನು ಪಾವತಿಸಿರಬೇಕು;

ಅಥವಾ

- ಲಾಕರ್ ಸೌಲಭ್ಯವನ್ನು ಪಡೆದಿರಬೇಕು.

**ಸರ್ವ ಸದಸ್ಯರ ಸಭೆಯ ಹಾಜರಾತಿ ಬಗ್ಗೆ:**

ಯಾವುದೇ ಸದಸ್ಯರುಗಳು ಕಳೆದ 5 ವಾರ್ಷಿಕ ಸರ್ವಸದಸ್ಯರ ಸಭೆಗಳ ಪೈಕಿ ಕನಿಷ್ಠ 3 ವಾರ್ಷಿಕ ಸರ್ವ ಸದಸ್ಯರ ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಹಿಂದಿನ ವರ್ಷದಲ್ಲಿ ಈ ಮೇಲೆ ನಮೂದಿಸಿರುವ ಸೇವೆಗಳನ್ನಾಗಲಿ ಅಥವಾ ಸೌಲಭ್ಯಗಳನ್ನಾಗಲಿ ಪಡೆಯದಿದ್ದಲ್ಲಿ ಅಂತಹ ಸದಸ್ಯರುಗಳು ಮುಂದಿನ 3 ವಾರ್ಷಿಕ ಸರ್ವಸದಸ್ಯರ ಸಭೆಗಳ ಕಲಾಪಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಅಥವಾ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಪ್ರಸಕ್ತ ಸಾಲಿನ ವಾರ್ಷಿಕ ಸಭೆಯ ಹಾಜರಾತಿಗಾಗಿ ಸದಸ್ಯರು "ಬ್ಯಾಂಕ್ ನೀಡಿದ ಲಿಂಕ್ ಮೂಲಕ ಲಾಗಿನ್ " ಆಗಿ ಭಾಗವಹಿಸಿದರೆ ಅದನ್ನು ಸಭೆಯ ಹಾಜರಾತಿ ಎಂದು ಪರಿಗಣಿಸಲಾಗುವುದು,

## ಷೇರು ಮೊತ್ತದ ಬಗ್ಗೆ :

ದಿನಾಂಕ 12.01.2015ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರಿಂದ ನೋಂದಣಿಯಾಗಿರುವ ಉಪನಿಯಮಗಳ ತಿದ್ದುಪಡಿ 10.01 ಮತ್ತು 10.03ರ ಪ್ರಕಾರ ಸದಸ್ಯರುಗಳು ರೂ.100/-ರ ಮೌಲ್ಯದ ಕನಿಷ್ಠ ಹತ್ತು ಷೇರುಗಳನ್ನು ಹೊಂದಿರಬೇಕಾಗಿರುತ್ತದೆ. ಕನಿಷ್ಠ ಹತ್ತು ಷೇರುಗಳನ್ನು ಹೊಂದದೆ ಇರುವ ಸದಸ್ಯರುಗಳಿಗೆ ಬ್ಯಾಂಕಿನ ಸರ್ವಸದಸ್ಯರ ಸಭೆಯ ಕಲಾಪಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಹಕ್ಕು ಇರುವುದಿಲ್ಲ .

**ವಿ.ಸೂ:** (1) ಗುರುತಿನ ಚೀಟಿಯನ್ನು ಬ್ಯಾಂಕಿನಿಂದ ಪಡೆಯದಿರುವ ಸದಸ್ಯರು ಕೂಡಲೇ ಪಾಸ್‌ಪೋರ್ಟ್ ಅಳತೆಯ ತಮ್ಮ ಭಾವಚಿತ್ರವನ್ನು ನೀಡಿ ಇದನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ.

## ಪ್ರಧಾನ ಮಂತ್ರಿ ಜೀವನಜ್ಯೋತಿ ವಿಮಾ ಯೋಜನೆ (PMJJBY) :

ಬ್ಯಾಂಕಿನ ಗ್ರಾಹಕನು ತನ್ನ ಹೆಸರಿನಲ್ಲಿ ಒಂದು ಉಳಿತಾಯ ಖಾತೆಯನ್ನು ಹೊಂದಿರಬೇಕು. ಉಳಿತಾಯ ಖಾತೆಯು ಜಂಟಿ ಹೆಸರುಗಳಲ್ಲಿದ್ದರೆ, ಈ ಸೌಲಭ್ಯವನ್ನು ಮೊದಲನೇ ಹೆಸರಿನ ವ್ಯಕ್ತಿಗೆ ನೀಡಲಾಗುವುದು. ವ್ಯಕ್ತಿಯು 18 ವರ್ಷಗಳನ್ನು ದಾಟಿರಬೇಕು ಮತ್ತು 50 ವರ್ಷಗಳನ್ನು ಮೀರಿರಬಾರದು. ಜೀವ ವಿಮಾ ಮೊತ್ತ ರೂ.2 ಲಕ್ಷಗಳು. ಇದಕ್ಕೆ ಕೊಡಬೇಕಾದ ವಾರ್ಷಿಕ ಪ್ರೀಮಿಯಂ ಮೊತ್ತವು ರೂ.330/-. ವ್ಯಕ್ತಿಯು ಯಾವುದೇ ಕಾರಣಕ್ಕೆ ಮರಣ ಹೊಂದಿದಾಗ ನಾಮಿನಿಗೆ ರೂ.2 ಲಕ್ಷಗಳು ಸಿಗುತ್ತದೆ. ವಿಮೆಯನ್ನು ಪ್ರತಿ ವರ್ಷವು ನವೀಕರಿಸಬೇಕು. ಇದಕ್ಕಾಗಿ ಗ್ರಾಹಕನಿಂದ ಅಧಿಕಾರ ಪತ್ರವನ್ನು ಪಡೆದು ಪ್ರೀಮಿಯಂನ್ನು ಪ್ರತಿ ವರ್ಷವು ಆತನ ಖಾತೆಗೆ ಖರ್ಚು ಹಾಕಿ ವಿಮಾ ಕಂಪನಿಗೆ ಬ್ಯಾಂಕು ಪಾವತಿಸಬೇಕು. ಒಬ್ಬ ವ್ಯಕ್ತಿಯು 55ನೇ ವರ್ಷದವರೆಗೆ ಈ ಪಾಲಿಸಿಯನ್ನು ನವೀಕರಿಸಬಹುದು.

## ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ (PMSBY) :

ಬ್ಯಾಂಕಿನ ಗ್ರಾಹಕನು ತನ್ನ ಹೆಸರಿನಲ್ಲಿ ಒಂದು ಉಳಿತಾಯ ಖಾತೆಯನ್ನು ಹೊಂದಿರಬೇಕು. ಉಳಿತಾಯ ಖಾತೆಯು ಜಂಟಿ ಹೆಸರುಗಳಲ್ಲಿದ್ದರೆ, ಈ ಸೌಲಭ್ಯವನ್ನು ಮೊದಲನೇ ಹೆಸರಿನ ವ್ಯಕ್ತಿಗೆ ನೀಡಲಾಗುವುದು. ವ್ಯಕ್ತಿಯು 18 ವರ್ಷಗಳನ್ನು ದಾಟಿರಬೇಕು ಮತ್ತು 70 ವರ್ಷಗಳನ್ನು ಮೀರಿರಬಾರದು. ಅಪಘಾತ ವಿಮಾ ಮೊತ್ತ ರೂ.2 ಲಕ್ಷಗಳು. ಇದಕ್ಕೆ ಕೊಡಬೇಕಾದ ವಾರ್ಷಿಕ ಪ್ರೀಮಿಯಂ ಮೊತ್ತವು ರೂ.12/-. ವ್ಯಕ್ತಿಗೆ ಅಪಘಾತ ಸಂಭವಿಸಿ ಆತನ ಅಂಗಗಳಿಗೆ ಹಾನಿ ಉಂಟಾದಾಗ ಅಥವಾ ವ್ಯಕ್ತಿಯು ಮರಣ ಹೊಂದಿದಾಗ ಸಾಮಾನ್ಯ ವಿಮಾ ಷರತ್ತುಗಳ ಪ್ರಕಾರ ರೂ. 2 ಲಕ್ಷಗಳವರೆಗೆ ಪರಿಹಾರ ಸಿಗುತ್ತದೆ. ವಿಮೆಯನ್ನು ಪ್ರತಿ ವರ್ಷವು ನವೀಕರಿಸಬೇಕು. ಇದಕ್ಕಾಗಿ ಗ್ರಾಹಕನಿಂದ ಅಧಿಕಾರ ಪತ್ರವನ್ನು ಪಡೆದು ಪ್ರೀಮಿಯಂನ್ನು ಪ್ರತಿ ವರ್ಷವು ಆತನ ಖಾತೆಗೆ ಖರ್ಚು ಹಾಕಿ ವಿಮಾ ಕಂಪನಿಗೆ ಬ್ಯಾಂಕು ಪಾವತಿಸಬೇಕು.

## ಸದಸ್ಯರಿಗೆ ಸಲಹೆಗಳು :

ಸದಸ್ಯರು ಲಾಭಾಂಶವನ್ನು (ಡಿವಿಡೆಂಡ್) ಪಡೆಯದೆ ಇದ್ದಲ್ಲಿ ಆ ಮೊತ್ತವನ್ನು ಮೂರು ವರ್ಷಗಳ ನಂತರ ಕಾಯ್ದೆಯನ್ವಯ ಕಾಯ್ದಿಟ್ಟನಿಧಿಗೆ ವರ್ಗಾವಣೆ ಮಾಡಬೇಕಾಗುತ್ತದೆ. ತಾವು ಉಳಿತಾಯ ಖಾತೆಯನ್ನು ಇದುವರೆವಿಗೂ ತೆರೆಯದೆ ಇದ್ದಲ್ಲಿ ಕೂಡಲೇ ಉಳಿತಾಯ ಖಾತೆಯನ್ನು ತೆರೆಯಲು ವಿನಂತಿಸಲಾಗಿದೆ.

## ಡಿ.ಐ.ಸಿ.ಜಿ.ಸಿ. ವಿಮಾ ಸೌಲಭ್ಯ : (DICGC)

ಪ್ರತಿ ಠೇವಣಿದಾರರ ರೂ. 5,00,000/- (ಐದು ಲಕ್ಷ ರೂಪಾಯಿ)ಗಳ ವರೆಗಿನ ಠೇವಣಿಯು ಡಿಪಾಸಿಟ್ ಇನ್ಸೂರೆನ್ಸ್ ಕ್ರೆಡಿಟ್ ಗ್ಯಾರೆಂಟಿ ಕಾರ್ಪೋರೇಷನ್ ಆಫ್ ಇಂಡಿಯಾ ಸಂಸ್ಥೆಯ ವಿಮಾ ರಕ್ಷಣೆಗೆ ಒಳಪಟ್ಟಿರುತ್ತದೆ.

<u>ಸದಸ್ಯರ ಗಮನಕ್ಕೆ</u>

1. ಟಿ.ಡಿ.ಎಸ್. ಕಡಿತದಿಂದ ವಿನಾಯಿತಿ ಪಡೆಯಲು ಅರ್ಹ ಸದಸ್ಯರ ಆದಾಯ ತೆರಿಗೆ ಫಾರಂ ನಂ.15ಜಿ / 15 ಹೆಚ್ ಅನ್ನು ತಮ್ಮ ಪ್ಯಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಸಲ್ಲಿಸಬಹುದು.. ಪ್ಯಾನ್ ಸಂಖ್ಯೆ ಇಲ್ಲವಾದರೆ ಶೇ.20ರಂತೆ ತೆರಿಗೆ ಕಡಿತ ಮಾಡಲಾಗುವುದು. ಸದಸ್ಯರು ಕೂಡಲೆ ಶಾಖಾ ವ್ಯವಸ್ಥಾಪಕರನ್ನು ಅಥವಾ ಶಾಖಾ ಕಛೇರಿಯಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

1.a) ಆದಾಯ ತೆರಿಗೆ ಇಲಾಖೆಯ ಆದೇಶದನ್ವಯ ಪ್ರಸಕ್ತ ಸಾಲಿನಲ್ಲಿ ಹಿರಿಯ ನಾಗರೀಕರಿಗೆ ರೂ.50,000/- ಹಾಗೂ ಇತರರಿಗೆ ರೂ.40,000/- ವರೆಗಿನ ಬಡ್ಡಿ ಅದಾಯಕ್ಕೆ ತೆರಿಗೆ ಮೂಲದಲ್ಲಿ ಕಡಿತ (ಟಿಡಿಎಸ್) ವಿನಾಯಿತಿ ಇರುತ್ತದೆ.

2. ಆರ್.ಬಿ.ಐ. ಮಾರ್ಗಸೂಚಿಗಳ ಪ್ರಕಾರ <u>“ನಿಮ್ಮ ಗ್ರಾಹಕರನ್ನು ತಿಳಿಯಿರಿ” (**KYC**)</u> ದಾಖಲೆಗಳನ್ನು ನೀವು ಖಾತೆ ಹೊಂದಿರುವ ಶಾಖೆಗೆ ವಿಳಂಬಿಸದೆ ನೀಡತಕ್ಕದ್ದು ಅಲ್ಲದೆ ನಿಮ್ಮ ಅಧಾರ್‌ಕಾರ್ಡ್ ಮತ್ತು ಪ್ಯಾನ್ ಕಾರ್ಡ್‌ಗಳ ಪ್ರತಿಗಳನ್ನು ಸಲ್ಲಿಸಿ ದೃಢೀಕರಿಸಿಕೊಳ್ಳತಕ್ಕದ್ದು..

3. ಬ್ಯಾಂಕು ಖಾತೆಯಿಂದ ನಗದು ಹಿಂಪಡೆಯುವ ಮೇಲಿನ ತೆರಿಗೆ : **( Tax on cash withdrawal) :**

ಆದಾಯ ತೆರಿಗೆ ಕಾಯ್ದೆ ಕಲಂ 194ಎನ್ ಈ ಸೆಕ್ಷನ್‌ಗೆ ಮಾಡಲ್ಪಟ್ಟ ಇತ್ತೀಚಿನ ತಿದ್ದುಪಡಿ ಪ್ರಕಾರ ದಿನಾಂಕ 01.07.2020ರಿಂದ ಅನ್ವಯಿಸುವಂತೆ ಹಿಂದಿನ 3 ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸದ ಗ್ರಾಹಕರು ಒಂದು ಆರ್ಥಿಕ ವರ್ಷದಲ್ಲಿ ತನ್ನ ಒಂದು ಅಥವಾ ಹೆಚ್ಚಿನ ಖಾತೆಗಳಿಂದ ರೂ.20ಲಕ್ಷಗಳಿಂದ ಒಂದು ಕೋಟಿಯವರೆಗೆ ನಗದು ಹಿಂಪಡೆದರೆ ಶೇ.2ರಷ್ಟು ಮತ್ತು ಒಂದು ಕೋಟಿಗೆ ಮೇಲ್ಪಟ್ಟು ನಗದು ಹಿಂಪಡೆದರೆ ಶೇ.5 ರಷ್ಟು ತೆರಿಗೆ ಪಾವತಿಸಬೇಕಾಗಿರುತ್ತದೆ.

ಹಿಂದಿನ ಮೂರು ವರ್ಷಗಳ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದರೆ ಒಂದು ಆರ್ಥಿಕ ವರ್ಷದಲ್ಲಿ ರೂ.1ಕೋಟಿವರೆಗೆ ನಗದು ಹಿಂಪಡೆಯುವ ಅವಕಾಶ ಇದ್ದು, 1ಕೋಟಿಗಿಂತ ಮೇಲ್ಪಟ್ಟು ನಗದು ಹಿಂಪಡೆದರೆ ಮೀರಿದ ನಗದಿಗೆ ಶೇ.2ರಷ್ಟು ತೆರಿಗೆ ಪಾವತಿಸಬೇಕಾಗಿರುತ್ತದೆ.